ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/HRMS/NPS Backlog/03/2020-21

ಕಾಲೇಜು ಶಿಕ್ಷಣ ಆಯುಕ್ತರವರ ಕಛೇರಿ,
ಬೆಂಗಳೂರು, ದಿನಾಂಕ:04/12/2020

## ಸುತ್ತೋಲೆ

**ವಿಷಯ:** ಎನ್.ಪಿ.ಎಸ್ ಗೆ ಒಳಪಟ್ಟ ಅಧಿಕಾರಿ/ನೌಕರರ ಬ್ಯಾಕ್‌ಲಾಗ್ ಪಾವತಿಗಾಗಿ ಷೆಡ್ಯೂಲ್ 4 & 5 ನ್ನು ಜನರೇಟ್ ಮಾಡಿ ಕೆ2 ಮುಖಾಂತರ ಎನ್.ಪಿ.ಎಸ್ ಘಟಕಕ್ಕೆ ಸಲ್ಲಿಸುವ ಕುರಿತು.

**ಉಲ್ಲೇಖ:** ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ: 06/11/2020

*****

ಪ್ರಸ್ತಾಪಿತ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಎನ್.ಪಿ.ಎಸ್ ಗೆ ಒಳಪಡುವ ಸಿಬ್ಬಂದಿಗಳ ಸರ್ಕಾರದ ಬ್ಯಾಕ್‌ಲಾಗ್ ಪಾವತಿಗಾಗಿ ಷೆಡ್ಯೂಲ್ 4 & 5 ಗಳನ್ನು ಹೆಚ್.ಆರ್.ಎಂ.ಎಸ್ ನಲ್ಲಿ ಜನರೇಟ್ ಮಾಡಿ ಎಲ್ಲಾ ಮಾಹಿತಿಗಳು ಸರಿಯಿರುವ ಕುರಿತು ಖಚಿತಪಡಿಸಿಕೊಂಡು, ಸರ್ಕಾರದ ವಂತಿಗೆಯೊಂದಿಗೆ ಬಡ್ಡಿಯನ್ನು NPS - Schedule Interest Calculation ಮುಖಾಂತರ ಲೆಕ್ಕಾಚಾರ ಮಾಡಿ ಮೊದಲಿಗೆ ಷೆಡ್ಯೂಲ್ 5 ಅನ್ನು ನಂತರ ಷೆಡ್ಯೂಲ್ 4 ನ್ನು K2 ಮುಖಾಂತರ ನೂತನ ಪಿಂಚಣಿ ಘಟಕಕ್ಕೆ ಕಳುಹಿಸುವಂತೆ ಮತ್ತು ಹಾರ್ಡ್‌ಕಾಪಿಯನ್ನು ಡಿ.ಡಿ.ಓ ಸಹಿಯೊಂದಿಗೆ ತಮ್ಮ ಜಿಲ್ಲೆಯ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ ಋಣ ನಿರ್ವಹಣೆ ಇಲಾಖೆಗೆ ದಿನಾಂಕ: 30/11/2020 ರೊಳಗಾಗಿ ಕಡ್ಡಾಯವಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆದರೆ, ಇದುವರೆವಿಗೂ ಸರ್ಕಾರದ ಬ್ಯಾಕ್‌ಲಾಗ್ ಪಾವತಿಗಾಗಿ ಅನೇಕ ಡಿ.ಡಿ.ಓ ಗಳು ತಮ್ಮ ಸಿಬ್ಬಂದಿಗಳ ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡದಿರುವ / ತಪ್ಪಾಗಿ ಜನರೇಟ್ ಮಾಡಿರುವ ಬಗ್ಗೆ ಎನ್.ಪಿ.ಎಸ್ ಜಂಟಿನಿರ್ದೇಶಕರು ಇಲಾಖೆಯ ಗಮನಕ್ಕೆ ತಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲಾಗಿರುತ್ತದೆ. ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡುವ ಸಂದರ್ಭದಲ್ಲಿನ ತಾಂತ್ರಿಕ ದೋಷಗಳನ್ನು ಈಗಾಗಲೇ ಸರಿಪಡಿಸಲಾಗಿದ್ದು, ಕೂಡಲೇ ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡಿ K2 ಮುಖಾಂತರ ನೂತನ ಪಿಂಚಣಿ ಘಟಕಕ್ಕೆ ಕಳುಹಿಸುವಂತೆ ಸೂಚಿಸಲಾಗಿದೆ.

ಮುಂದುವರೆದು, ಉಲ್ಲೇಖಿತ ಸುತ್ತೋಲೆಯಲ್ಲಿ ಲಗತ್ತಿಸಲಾಗಿದ್ದ ಪಟ್ಟಿಯಲ್ಲಿನ ಸಿಬ್ಬಂದಿಗಳನ್ನು ಹೊರತುಪಡಿಸಿ ತಮ್ಮ ಕಾಲೇಜು/ಕಛೇರಿ ವ್ಯಾಪ್ತಿಯಲ್ಲಿನ ಎನ್.ಪಿ.ಎಸ್ ಬ್ಯಾಕ್‌ಲಾಗ್ ವಂತಿಗೆ (ನೌಕರರ ವಂತಿಗೆ) ಯನ್ನು ಇದುವರೆವಿಗೂ ಪಾವತಿಸದಿರುವಂತಹ ಸಿಬ್ಬಂದಿಗಳ ಷೆಡ್ಯೂಲ್ 4 & 5 ಗಳನ್ನು ಸಹ ಸಲ್ಲಿಸತಕ್ಕದ್ದು.

ಬ್ಯಾಕ್‌ಲಾಗ್ ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡುವಾಗ ಉಂಟಾಗುವ ತಾಂತ್ರಿಕ ದೋಷಗಳನ್ನು ಪರಿಹರಿಸುವ ಬಗ್ಗೆ ಈ ಕೆಳಕಂಡಂತೆ ಕ್ರಮ ವಹಿಸುವುದು.

1. ಮೊದಲಿಗೆ ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡುವ ಮುನ್ನ ಮೂಲವೇತನ ಮತ್ತು ತುಟ್ಟಿಭತ್ಯೆ ಸರಿಯಿರುವ ಕುರಿತು ಖಚಿತಪಡಿಸಿಕೊಳ್ಳುವುದು.
2. ಷೆಡ್ಯೂಲ್ 5 ನ್ನು ಕೆ2 ಗೆ push ಮಾಡಿದ ನಂತರವೇ ಷೆಡ್ಯೂಲ್ 4 ನ್ನು ಕೆ2 ಗೆ push ಮಾಡತಕ್ಕದ್ದು.
3. ಕೆಲವು ಸಿಬ್ಬಂದಿಗಳ ಷೆಡ್ಯೂಲ್ 4 ನಲ್ಲಿ ಮೂಲವೇತನ "0" ತೋರಿಸುತ್ತಿದ್ದರೂ, ಅದನ್ನು ಅನುಮೋದಿಸಿ ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡಿ ಕೆ2 ಮುಖಾಂತರ ಎನ್.ಪಿ.ಎಸ್ ಘಟಕಕ್ಕೆ ಕಳುಹಿಸಲಾಗಿರುತ್ತದೆ. ಇಂತಹ ಪ್ರಕರಣಗಳನ್ನು ಸರ್ಕಾರದ ಬ್ಯಾಕ್‌ಲಾಗ್ ವಂತಿಗೆ ಪಾವತಿಗಾಗಿ ಪರಿಗಣಿಸಲಾಗುವುದಿಲ್ಲ.
4. ಕೆಲವು ಸಿಬ್ಬಂದಿಗಳ ಷೆಡ್ಯೂಲ್ 4 ನಲ್ಲಿ ಮೂಲವೇತನ ಅಥವಾ ತುಟ್ಟಿಭತ್ಯೆ ವಿವರಗಳನ್ನು ತಪ್ಪಾಗಿ ಅನುಮೋದಿಸಿ ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡಿ ಕೆ2 ಮುಖಾಂತರ ಎನ್.ಪಿ.ಎಸ್ ಘಟಕಕ್ಕೆ ಕಳುಹಿಸಿದ್ದಲ್ಲಿ, ಅಂತಹ ಪ್ರಕರಣಗಳನ್ನು Problem/Query/Request ಮೆನು unapproval

ಮಾಡಲು ಅವಕಾಶವಿರುವುದಿಲ್ಲ ಹಾಗೂ ಸರ್ಕಾರದ ಬ್ಯಾಕ್‌ಲಾಗ್ ವಂತಿಗೆ ಪಾವತಿಗಾಗಿ ಪರಿಗಣಿಸಲಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಷೆಡ್ಯೂಲ್ 4 & 5 ಗಳ Unapproval ಗಾಗಿ ಪ್ರಾನ್ ಸಂಖ್ಯೆ ಮತ್ತು ಕೆ.ಜಿ.ಐ.ಡಿ ಸಂಖ್ಯೆಯೊಂದಿಗೆ NPS Helpdesk ಗೆ ಇ-ಮೇಲ್ (nps-cell@karnataka.gov.in & ato.nps@karnataka.gov.in) ಕಳುಹಿಸುವುದು. Unapproval ಆದ ನಂತರ ಮೂಲವೇತನವನ್ನು Revised Schedule IV & V ನಲ್ಲಿ ಸರಿಯಾಗಿ ನಮೂದಿಸಿ ಅಪ್ರೂವ್ ಮಾಡತಕ್ಕದ್ದು.

5. ಷೆಡ್ಯೂಲ್ 4 & 5 ಗಳನ್ನು ತಪ್ಪಾಗಿ ಅನುಮೋದಿಸಿ ಕೆ2ಗೆ push ಮಾಡದಿರುವ ಪ್ರಕರಣಗಳಲ್ಲಿ Unapproval ಗಾಗಿ ಹೆಚ್.ಆರ್.ಎಂ.ಎಸ್ ನಲ್ಲಿ Problem/Query/Request ಮೆನು ಅಡಿಯಲ್ಲಿ Request for unapproval of Schedule IV & V ಗೆ ಹಾಕಿ NPS Cell ವತಿಯಿಂದ Unapproval ಆದ ನಂತರ Revised Schedule IV ಅನ್ನು ಮತ್ತೊಮ್ಮೆ ಜನರೇಟ್ ಮಾಡುವುದು.
6. Unsuccessful: PRAN is in progress in K2 System ಅಥವಾ Database already present in Khajane 2 ಎನ್ನುವ error message ಬಂದಲ್ಲಿ ಈಗಾಗಲೇ ಕಳುಹಿಸಲಾಗಿರುವ ಷೆಡ್ಯೂಲ್ 4 & 5 ಗಳು ಕೆ2 ಡಾಟಾಬೇಸ್‌ನಲ್ಲಿ ಲಭ್ಯವಿರುತ್ತದೆ. ಅಂತಹ ಪ್ರಕರಣಗಳಲ್ಲಿ ಷೆಡ್ಯೂಲ್ 4 & 5 ಗಳು ಸರಿಯಿದ್ದಲ್ಲಿ, ಮತ್ತೊಮ್ಮೆ ಕೆ2 ಗೆ push ಮಾಡುವ ಅಗತ್ಯವಿರುವುದಿಲ್ಲ, ಹಾರ್ಡ್ ಕಾಪಿಯನ್ನು ಡಿ.ಡಿ.ಓ ಸಹಿಯೊಂದಿಗೆ ತಮ್ಮ ಜಿಲ್ಲೆಯ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ ಋಣ ನಿರ್ವಹಣೆ ಇಲಾಖೆಗೆ ಸಲ್ಲಿಸತಕ್ಕದ್ದು. ಒಂದು ವೇಳೆ ತಪ್ಪಿದ್ದಲ್ಲಿ ಮಾತ್ರ ಷೆಡ್ಯೂಲ್ 4 & 5 ಗಳ Unapproval ಗಾಗಿ ಕ್ರ.ಸಂ 4 ರಲ್ಲಿ ನೀಡಲಾಗಿರುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು.
7. ಷೆಡ್ಯೂಲ್ 4 & 5 ಗಳನ್ನು ಜನರೇಟ್ ಮಾಡುವ ಕುರಿತು ಯಾವುದೇ ಇನ್ನಿತರೇ ಸಂದೇಹಗಳಿದ್ದಲ್ಲಿ ತಮ್ಮ ಜಿಲ್ಲೆಯ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ ಋಣ ನಿರ್ವಹಣೆ ಇಲಾಖೆಯನ್ನು ಖುದ್ದಾಗಿ ಸಂಪರ್ಕಿಸಿ ಪರಿಹರಿಸಿಕೊಳ್ಳತಕ್ಕದ್ದು.

ಮೇಲಿನ ಮಾರ್ಗಸೂಚಿಗಳನ್ನು ಅನುಸರಿಸಿ, ಇದುವರೆವಿಗೂ ಷೆಡ್ಯೂಲ್ 4 & 5 ಗಳನ್ನು ಸಲ್ಲಿಸದಂತಹ ಅಧಿಕಾರಿ/ಸಿಬ್ಬಂದಿಗಳ ಪ್ರಕರಣಗಳನ್ನು ಆಯಾ ಡಿ.ಡಿ.ಓ ಗಳು ಆದ್ಯತೆ ಮೇರೆಗೆ ಪರಿಗಣಿಸಿ ಈ ಕೂಡಲೇ ಷೆಡ್ಯೂಲ್ 4 & 5 ಗಳನ್ನು K2 ಮುಖಾಂತರ ನೂತನ ಪಿಂಚಣಿ ಘಟಕಕ್ಕೆ ಕಳುಹಿಸುವಂತೆ ಮತ್ತು ಹಾರ್ಡ್‌ಕಾಪಿಯನ್ನು ಡಿ.ಡಿ.ಓ ಸಹಿಯೊಂದಿಗೆ ತಮ್ಮ ಜಿಲ್ಲೆಯ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ ಋಣ ನಿರ್ವಹಣೆ ಇಲಾಖೆಗೆ ದಿನಾಂಕ: 15/12/2020 ರೊಳಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ, ಎನ್.ಪಿ.ಎಸ್ ಇಲಾಖೆಯ ಆಯುಕ್ತರ ನಿರ್ದೇಶನದ ಮೇರೆಗೆ ಸಂಬಂಧಿಸಿದ ಡಿ.ಡಿ.ಓ ಗಳ ಡಿಸೆಂಬರ್ ಮಾಹೆಯ ವೇತನವನ್ನು ಕಡ್ಡಾಯವಾಗಿ ಖಜಾನೆಯಲ್ಲಿ ತಡೆಹಿಡಿಯಲಾಗುವುದು.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ,**

1. ಪ್ರಾದೇಶಿಕ ಜಂಟಿನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಕಲ್ಬುರ್ಗಿ ಮತ್ತು ಶಿವಮೊಗ್ಗ – ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು:**

1. ಜಂಟಿನಿರ್ದೇಶಕರು, ಎನ್.ಪಿ.ಎಸ್ ಘಟಕ, 8ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01 – ಮಾಹಿತಿಗಾಗಿ.
2. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ.